ಜೆಎಸ್ಎಸ್ ಮಹಾವಿದ್ಯಾಪೀಠ
ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
ESTD - 1964
ಊಟಿರಸ್ತೆ, ಮೈಸೂರು-೫೭೦೦೨೫
☎ 0821-2548236 & 2548380 Fax: 0821-2548238 E-mail: jssautonomous@gmail.com

ಸಂಖ್ಯೆ: ಜೆಎಸ್ಎಸ್‌ಸಿಎಂ/ ದಿನಾಂಕ: 15.08.2013

## <u>ಪ್ರಕಟಣೆಯ ಕೃಪೆಗಾಗಿ</u>

### 'ದೇಶದ ಐಕ್ಯತೆ ಉಳಿಸಿಕೊಳ್ಳುವ ದಿಕ್ಕಿನಲ್ಲಿ ಶ್ರಮಿಸುವ ಅಗತ್ಯವಿದೆ'

ನಗರದ ಊಟಿರಸ್ತೆಯಲ್ಲಿರುವ ಜೆಎಸ್ಎಸ್ ಕಾಲೇಜು ಸಮುಚ್ಚಯದಲ್ಲಿ ಜರುಗಿದ 67ನೇ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವರಾದ ಡಾ. ಕೆ.ಜೆ. ಸುರೇಶ್‌ರವರು ಇಂದು ಭಾರತ ಯಾವ ಮಟ್ಟದಲ್ಲಿ ಸಾಧನೆ ಮಾಡಬೇಕಾಗಿತ್ತೊ ಆ ಮಟ್ಟದ ಸಾಧನೆ ಮಾಡಿಲ್ಲ. ಸ್ವಾಮಿ ವಿವೇಕನಂದ, ಮದನಮೋಹನ ಮಾಳವೀಯ ಇವರುಗಳ ಆದರ್ಶಗಳನ್ನು ಇಂದಿನ ಯುವಕರು ಅನುಸರಿಸಿ ಭಾರತವನ್ನು ಕಟ್ಟುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಬೇಕೆಂದು ಮತ್ತು ದೇಶದ ಐಕ್ಯತೆ ಉಳಿಸಿಕೊಳ್ಳುವ ದಿಕ್ಕಿನಲ್ಲಿ ಶ್ರಮಿಸಬೇಕೆಂದು ಕರೆಕೊಟ್ಟರು. ಮತ್ತೋರ್ವ ಭಾಷಣಕಾರರಾದ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರಾದ ಶ್ರೀ ಡಿ.ಎಸ್. ಸದಾಶಿವಮೂರ್ತಿಯವರು ಮಾತನಾಡಿ ಎಲ್ಲ ರೀತಿಯ ತ್ಯಾಗಮಾಡಿ ನಮಗೆ ಸ್ವಾತಂತ್ರ್ಯ ತಂದುಕೊಟ್ಟ ಎಲ್ಲ ಮಹನೀಯರನ್ನು ಸದಾ ನೆನೆಯುತ್ತಿರಬೇಕೆಂದು, ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದ ಸ್ಥಿತಿಗತಿ, ಸ್ವಾತಂತ್ರ್ಯದ ನಂತರದಿಂದ ಇಂದಿನವರೆಗೆ ಏನಾಗಿದೆ? ಮತ್ತು ಇಂದಿನಿಂದ ಮುಂದೇನು ಮಾಡಬೇಕೆಂದರ ಬಗ್ಗೆ ಗಂಭೀರವಾಗಿ ಯೋಚಿಸಬೇಕೆಂದು ತಿಳಿಸಿದರು.

ಜೆಎಸ್ಎಸ್ ಪದವಿಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಧ್ವಜಾರೋಹಣ ಮಾಡಿದರು. ಕಾಲೇಜಿನ ಎನ್.ಸಿ.ಸಿ ಅಧಿಕಾರಿಗಳಾದ ಲೆಫ್ಟಿನೆಂಟ್ ಹೆಚ್. ಎಸ್. ನಾಗೇಂದ್ರ ಕುಮಾರ್‌ರವರು ಸ್ವಾಗತಿಸಿದರು, ಸ್ಕೌಟ್ಸ್ ಅಧಿಕಾರಿಗಳಾದ ಶ್ರೀ ಎಂ.ಎಸ್. ವೆಂಕಟರಾವ್‌ರವರು ನಿರೂಪಿಸಿದರು. ಕಾಲೇಜಿನ ಅಕಾಡೆಮಿಕ್ ಡೀನ್ ಶ್ರೀ ಎಂ.ಬಿ. ಮಲ್ಲಿಕಾರ್ಜುನ ಪಂಡಿತ್‌ರವರು ವಂದಿಸಿದರು. ವಿದ್ಯಾರ್ಥಿ ವೃಂದದವರು ರಾಷ್ಟ್ರಗೀತೆಯನ್ನು ಹಾಡಿದರೆ, ವಿದ್ಯಾರ್ಥಿಯಾದ ಶ್ರೀ ಸುಮಂತ್ ದೇಶ ಭಕ್ತಿಗೀತೆ ಹಾಡಿದರು. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಸೋಮಶೇಖರ್‌ರವರು ಮತ್ತು ಅಧ್ಯಾಪಕ, ಅಧ್ಯಾಪಕೇತರ ವರ್ಗದವರು ಉಪಸ್ಥಿತರಿದ್ದರು ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

(ಪ್ರೊ. ಬಿ.ವಿ. ಸಾಂಬಶಿವಯ್ಯ)
**ಪ್ರಾಂಶುಪಾಲರು**
ಜೆ.ಎಸ್.ಎಸ್. ಕಾಲೇಜು,
ಊಟಿ ರಸ್ತೆ, ಮೈಸೂರು

ಗೆ

ಸಂಪಾದಕರು / ವರದಿಗಾರರು

\- - - - - - - - - - - - - - - -

\- - - - - - - - - - - - - - - -